**<u>ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ.RSB ವಕೀಲರಿಂದಃ-</u>**

ಪ್ರತಿವಾದಿ Land for sale ಎಂದು ಬೊರ್ಡ ಹಾಕಿ ಅದರಲ್ಲಿ ಮೊಬೈಲ ನಂಬರ ಕೊಟ್ಟಿದ್ದರು ನಾನು ಆ ನಂಬರಗೆ ಪೋನ ಮಾಡಿ ಭೇಟಿಯಾಗಿದೆ ಅದಿನಿಂದ ನನಗೆ ಮತ್ತು ಪ್ರತಿವಾದಿಗೆ ಪರಿಚಯ ಇದೆ. ದಿಃ 21-12-2023 ರಂದು ಭೇಟಿಯಾಗಿದ್ದೇನೆ. ಅದೇ ದಿನ ಖರೀದಿ ವ್ಯವಹಾರ ಸೇಡಂ ನ್ಯಾಯಾಲಯದ ಆವರಣದಲ್ಲಿ ಆಗಿದೆ. ಆದಿನ ಪ್ರತಿವಾದಿ ನ್ಯಾಯಾಲಯದ ಆವರಣದಲ್ಲಿ ಇದ್ದರು. ದಾವಾ ಜಮೀನುಗಳು 3 ಸರ್ವೆ ನಂಬರಗಳಲ್ಲಿ ಇವೆ. ಅವುಗಳ ಸರ್ವೆ ನಂಬರಗಳು 56/21, 56/14 ಮತ್ತು 56/2020. ಮೋಹನರೆಡ್ಡಿ ದಾವಾ ಸರ್ವೆ ನಂಬರಗಳ ಸಂಬಂಧ ಒಂದು ಅಗ್ರಿಮೆಂಟ ಮಾಡಿಕೊಂಡಿದ್ದಾರೆ. ಮೋಹನರೆಡ್ಡಿ ದಿಃ 02-12-2023 ಕ್ಕೆ ಸರ್ವೆ ನಂಬರ 56/21 ಕ್ಕೆ ರಲ್ಲಿ 30 ಗುಂಟೆ, 56/2020 ರಲ್ಲಿ 10 ಗುಂಟೆ ಅಗ್ರಿಮೆಂಟ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಅಗ್ರಿಮೆಂಟ ರೂ. 61,00,000/- ಆಗಿದೆ ಎಂದರೆ ಸರಿಯಲ್ಲ. ವಾದಿ ನನ್ನ ಸಮಕ್ಷಮ ಯಾವುದೇ ಅಗ್ರಿಮೆಂಟ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪ್ರತಿವಾದಿ ವಾದಿಗೆ ಅಗ್ರಿಮೆಂಟ ಬರೆದುಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 21-12-2023 ರಂದು ಪ್ರತಿವಾದಿ ವಾದಿಗೆ ನನ್ನ ಸಮಕ್ಷಮ ಅಗ್ರಿಮೆಂಟ ಬರೆದುಕೊಟ್ಟು 25,00,000/- ರೂ. ಮುಂಗಡ ಹಣ ಪಡೆದುಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 21-12-2023 ರಂದು ಆದ ಅಗ್ರಿಮೆಂಟ ಬಗ್ಗೆ ನನಗೆ ಗೊತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 3 ತಿಂಗಳ ಒಳಗಾಗಿ ಖರೀದಿ ಪತ್ರ ನೋಂದಣಿ ಮಾಡಿಕೊಡುತ್ತೇನೆ ಎಂದು ಅಗ್ರಿಮೆಂಟನಲ್ಲಿ ಒಪ್ಪಿ ಕೊಂಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ರಂಗಾರೆಡ್ಡಿ ಮತ್ತು ವಾದಿ ಇಬ್ಬರು ಸಂಬಂಧಿಕರು ಎಂದರೆ ಸರಿ. ಪ್ರತಿವಾದಿ ರಂಗಾರೆಡ್ಡಿಗೆ ಸರ್ವೆ ನಂಬರ 56/23 ರಲ್ಲಿ 1 ಎಕರೆ ಜಮೀನು ಮಾರಾಟ ಮಾಡಿ ದಿಃ 02-12-2023 ರಂದು ಅಗ್ರಿಮೆಂಟ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ ಪ್ರತಿವಾದಿ ವಾದಿಗೆ 1 ಎಕರೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ದಿಃ 21-12-2023 ರಂದು ವಾದಿ ಅಗ್ರಿಮೆಂಟ ಮಾಡಿಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

OS No.  46/2024

PW-3

ಸರಿಯಲ್ಲ.  ಸಾಕ್ಷಿಗೆ ದಿಃ 02-12-2023 ರ ಒಂದು ರಶೀದಿಯ Xerox ಅನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನದು ಎನ್ನಲಾದ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಸಾಕ್ಷಿಗೆ ದಿಃ 21-12-2023 ರ ಇನ್ನೊಂದು ರಶೀದಿಯ  Xerox ಅನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನದು ಎನ್ನಲಾದ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ 2 ದಾಖಲಾತಿಗಳನ್ನು  ವಾದಿ ಪರ ವಕೀಲರ ತಕರಾಗಿಗೆ ಒಳಪಟ್ಟು ನಿಶಿ-1 ಮತ್ತು 2 ಎಂದು ಗುರುತಿಸಲಾಯಿತು. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಸಾಕ್ಷಿ ತೆಲಗು ಭಾಷಿಕನಾಗಿದ್ದು ಶ್ರೀ.CNY ವಕೀಲರನ್ನು ಭಾಷಾಂತಕಾರರನ್ನಾಗಿ ನೇಮಿಸಿ ಸಾಕ್ಷಿ ವಿಚಾರಣೆ ಮಾಡಲಾಯಿತು)**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**

**ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ.RSB ವಕೀಲರಿಂದಃ-**

ನಾನು ರೂ. 85,00,000/- ಲಕ್ಷದ ವ್ಯವಹಾರದ ಒಂದು ಅಗ್ರಿಮೆಂಟಗೆ ಸಹಿ ಮಾಡಿದ್ದೇನೆ. ವಾದಿ, ಪ್ರತಿವಾದಿ, ರಂಗಾರೆಡ್ಡಿ ನನಗೆ ಗೊತ್ತು. ವ್ಯವಹಾರದ ಮಾತುಕತೆ ಕೊರ್ಟ ಆವರಣದಲ್ಲಿ ಆಗಿದೆ. ಅಗ್ರಿಮೆಂಟ ಆಗುವ ಮುಂಚೆ ಜಮೀನಿಗೆ ಹೋಗಿದ್ದೆವು. ಜಮಿನಿನಲ್ಲಿ Land for sale ಎಂದು ಬೊರ್ಡ ಹಾಕಿದ್ದರು ಅದರಲ್ಲಿ ಮೊಬೈಲ ನಂಬರ ಕೊಟ್ಟಿದ್ದರು ವಾದಿ ಆ ನಂಬರಗೆ ಪೋನ ಮಾಡಿದರು.ವಾದಿ ಪ್ರತಿವಾದಿಯಿಂದ ನನ್ನ ಸಮಕ್ಷಮ 85,00,000/- ರೂ. ಗಳಿಗೆ ಒಂದು ಅಗ್ರಿಮೆಂಟ ಮಾಡಿಕೊಂಡಿದ್ದಾರೆ. ಪ್ರತಿವಾದಿ ವಾದಿಗೆ 85,00,000/- ರೂ. ಕ್ಕೆ ಅಗ್ರಿಮೆಂಟ ಮಾಡಿಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ವಾದಿಗೆ 61,00,000/- ರೂ. 1ಎಕೆರಗೆ ಮಾರಾಟ ಮಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 21-12-2023 ರಂದು ಪ್ರತಿವಾದಿಯನ್ನು ನ್ಯಾಯಾಲಯದ ಆವರಣಕ್ಕೆ ಕರೆಯಿಸಿ ಮೊದಲಿನ ಅಗ್ರಿಮೆಂಟನ ವ್ಯವಹಾರ ಎಂದು ಹೇಳಿ ಹಣ ಕೊಟ್ಟರು ಎಂದರೆ ಸರಿಯಲ್ಲ. ಪ್ರತಿವಾದಿ ದಾವಾ ಜಮೀನಗಳನ್ನು ವಾದಿಗೆ 85,00,000/- ರೂ. ಮಾರಾಟ ಮಾಡಲು ಒಪ್ಪಿ ಅಗ್ರಿಮೆಂಟ ಬರೆದುಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಅಗ್ರಿಮೆಂಟನ ಸಂಗತಿಗಳ ಬಗ್ಗೆ ಮಾಹಿತಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ವಾದಿ ಸ್ನೇಹಿತರು ಎಂದರೆ ಸರಿ. ಕಾರಣ ವಾದಿಗೆ ಅನುಕೂಲ ಆಗುವಂತೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ವಾದಿಗೆ 1 ಎಕರೆ ಜಮೀನು ಮಾರಟ ಮಾಡಲು ಒಪ್ಪಿ ಅಗ್ರಿಮೆಂಟ ಬರೆದುಕೊಟ್ಟಿದ್ದಾರೆ ಆದರೆ 2ಎಕರೆ ಮಾರಾಟ ಮಾಡಲು ಒಪ್ಪಿ ಅಗ್ರಿಮೆಂಟ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ಎಕರೆ ಜಮೀನನ್ನು ರಂಗಾರೆಡ್ಡಿಗೆ ಮಾರಾಟ ಮಾಡಲು ಒಪ್ಪಿ ಮುಂಚೆ ಆತನಿಗೆ ಅಗ್ರಿಮೆಂಟ ಬರೆದುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 1 ಎಕರೆ ಜಮೀನನ್ನು 61,00,000/- ರೂ. ಗಳಿಗೆ ವಾದಿಗೆ ಮಾರಾಟ ಮಾಡಲು ಒಪ್ಪಿ ಅಗ್ರಿಮೆಂಟ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. 1 ಎಕರೆಯನ್ನು ಜಮೀನ್ನು 61,00,000/- ರೂ.

ಗಳಿಗೆ ರಂಗಾರೆಡ್ಡಿಗೆ ಮಾರಾಟ ಮಾಡಲು ಒಪ್ಪಿ  ಅಗ್ರಿಮೆಂಟ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ, ಪ್ರತಿವಾದಿ 61,00,000/- ರೂ. ಗಳಿಗೆ 1 ಎಕರೆ ವಾದಿಗೆ ಮಾರಾಟ ಮಾಡಿ ಕ್ರಯ ಪತ್ರ ಬರೆದುಕೊಡಲು ಇವತ್ತಿಗೂ ಸಿದ್ದರಿದ್ದಾರೆ ಎಂದರೆ ಸರಿಯಲ್ಲ, 85,00,000/- ರೂ. ಅಗ್ರಿಮೆಂಟ ಬಗ್ಗೆ  ಪ್ರತಿವಾದಿ ಮತ್ತು ಆತನ ಹೆಂಡತಿಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ, ನಾನು  ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**